ತೀರ್ಮಾನ ತೆಗೆದುಕೊಳ್ಳುತ್ತೀರೋ, ಅಥವಾ 30 ವರ್ಷದಿಂದ ಏನು ಮೊಕದ್ದಮೆ ನಡೆಯುತ್ತಿದೆ, ಆ ವಿಚಾರದಲ್ಲಿ ಸ್ಪಷ್ಟವಾಗಿ ಏನಾಗಿದೆ ಎಂಬುದನ್ನು ನಮ್ಮ ಗಮನಕ್ಕೆ ತರಬೇಕು. ಸದನದಲ್ಲಿ ನಡೆದಿರತಕ್ಕಂಥ ಮಾತು, It becomes the property of the House.

ಶ್ರೀ ಎಸ್. ಚೆಲುವರಾಯಸ್ವಾಮಿ: ತಮ್ಮ ಕೊಠಡಿಯಲ್ಲಿ ಎಲ್ಲಾ ಮುಖಂಡರುಗಳ ಜೊತೆ ಈ ವಿಷಯ ಕೋರ್ಟಿನಲ್ಲಿರುವುದರಿಂದ ಚರ್ಚೆ ಮಾಡುವುದು ಸೂಕ್ತವಲ್ಲ ಎಂದಾಗ ಅವರೂ ಸಹ ಚರ್ಚೆ ಮಾಡತಕ್ಕಂಥದ್ದು ಪ್ರಶ್ನೆಯಲ್ಲ, ನಾಳೆ ಸುಪ್ರೀಂಕೋರ್ಟಿನಲ್ಲಿ ಬರತಕ್ಕಂಥ ಕೇಸಿನಲ್ಲಿ, ಸಮಿತಿಯಿಂದ ಒಂದು ದಿನಾಂಕವನ್ನು ಅವರೇನು ಕೇಳುತ್ತಿದ್ದಾರೆ, ಸರ್ಕಾರದ ಪರವಾಗಿಯೂ ಸಹ ನಾವು ಕಾಲಾವಕಾಶದ ಮೂಲಕ ಕೇಳುವುದರ ಮೂಲಕ ನಾವು ಇದನ್ನು ಮುಂದಿನ ದಿನಗಳಲ್ಲಿ ಎಲ್ಲಾ ಪಕ್ಷದವರೂ ಸೇರಿ ಮುಖ್ಯಮಂತ್ರಿಯವರು ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವೆಂದು ಏನು ನಮ್ಮ ವಿರೋಧಪಕ್ಷದ ನಾಯಕರು, ಖರ್ಗೆಯವರು ಕೆಲವು ಮುಖಂಡರುಗಳು ತಿಳಿಸಿದರು, ಅದರಂತೆ ನಾನು ದೆಹಲಿಯಲ್ಲಿರುವಂಥ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಂಪರ್ಕಿಸಿದಾಗ, ಮುಖ್ಯಮಂತ್ರಿಯವರು ಇದಕ್ಕೆ ಒಪ್ಪಿದ್ದಾರೆ. ನಾನು ಅಡ್ವೋಕೇಟ್ ಜನರಲ್‌ರವರ ಮೂಲಕ ಟೈಮ್ ತೆಗೆದುಕೊಳ್ಳಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ತಿಳಿಸಲಿಕ್ಕೆ ಅವರು ಅನುಮತಿಯನ್ನು ಕೊಟ್ಟಿದ್ದಾರೆ. ಇವತ್ತಿನ ಸಂಜೆಯೊಳಗೆ ಅಡ್ವೋಕೇಟ್ ಜನರಲ್‌ರವರಿಗೆ ಹೇಳುತ್ತಾರೆ. ಈಗ ಅವರಿನ್ನೂ ಹೇಳಲಿಲ್ಲ. ಎಂದಿದ್ದಾರೆ, ಹಾಗಾಗಿ ಅದರಿಂದ ಯಾವುದೇ ತೊಂದರೆಯಿಲ್ಲ.

ಅಧ್ಯಕ್ಷರು: ಆರಗ ಜ್ಞಾನೇಂದ್ರವರೇ ಎರಡು ನಿಮಿಷದೊಳಗೆ ಮಾತನಾಡಿ ಮುಗಿಸಬೇಕು.

(ಆ) ವಿಷಯ: ತೀರ್ಥಹಳ್ಳಿ ತಾಲ್ಲೂಕು ಹಣಿಗೆರೆ ಗ್ರಾಮದಲ್ಲಿರುವ ಎರಡು ವಿಗ್ರಹಗಳನ್ನು ಒಡೆದು ಹಾಕಿರುವ ಬಗ್ಗೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ನಿನ್ನೆ ಸಂಜೆಯ ಹೊತ್ತಿಗೆ ನನ್ನ ಕ್ಷೇತ್ರದ ಹಣಿಗೆರೆ ಎಂದು ಒಂದು ಹಳ್ಳಿಯಿದೆ. ಅಲ್ಲಿರತಕ್ಕಂಥ ಗುಡಿಯಲ್ಲಿ ಎರಡು ವಿಗ್ರಹಗಳನ್ನು ಪುಡಿ ಪುಡಿ ಮಾಡಿ ಎಸೆದಿದ್ದಾರೆ. ಈ ಕೃತ್ಯದಿಂದ ನನ್ನ ಕ್ಷೇತ್ರ ತುಂಬಾ ಉದ್ವಿಗ್ನ ಪರಿಸ್ಥಿತಿಯಲ್ಲಿ ಇವತ್ತು ಇದೆ, ನಿನ್ನೆ ಊರಿನವರು ಸೇರಿ ಆ ಇಬ್ಬರು ಅಪರಾಧಿಗಳನ್ನು ಹಿಡಿದಿದ್ದಾರೆ. ಆಶ್ಚರ್ಯವೆಂದರೆ ತೀರ್ಥಹಳ್ಳಿಯ ಹಣಿಗೆರೆ, ಅಲ್ಲಿಂದ ಕುಂದೂರ ಕೂಲಂಬಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ಭಾಗದವರು ಅವರು. ಅಲ್ಲಿಂದ ಒಂದು ನನ್ನ

ತಾಲ್ಲೂಕಿನಲ್ಲಿರತಕ್ಕಂಥ ಒಂದು ದೇವಸ್ಥಾನದ ಎರಡು ವಿಗ್ರಹ ಒಂದು ಶಿವಲಿಂಗ ಮತ್ತು ದುರ್ಗಾ ಪರಮೇಶ್ವರಿ, ಈ ವಿಗ್ರಹಗಳನ್ನು ಅಲ್ಲೇ ಇರತಕ್ಕಂಥ ಶೂಲಗಳನ್ನು ಕಿತ್ತು ಒಡೆದು ಪುಡಿ ಪುಡಿ ಮಾಡಿದ್ದಾರೆ. ಈ ಕೃತ್ಯವೆಸಗಿದ ನಂತರ ಅಲ್ಲೇ ಹಣಿಗೆರೆಯಲ್ಲಿರತಕ್ಕಂಥ ಒಂದು ಟೆಲಿಫೋನ್ ಬೂತ್‌ನಿಂದ ಫೋನ್ ಮಾಡಿ ನಾವು ಕೆಲಸ ಮುಗಿಸಿದ್ದೇವೆಂದು ಹೇಳುತ್ತಿದ್ದಾರೆ. ಊರಿನವರಿಗೆ ಇವರ ಬಗ್ಗೆ ಅನುಮಾನ ಬಂದು ಅವರನ್ನು ಹಿಡಿದು ವಿಚಾರಿಸಲಾಗಿ, ನಾವು ವಿಗ್ರಹಗಳನ್ನು ಒಡೆದಿದ್ದು ಹೌದು ಎಂದು ಒಪ್ಪಿಕೊಂಡಿದ್ದಾರೆ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ಹಣಿಗೆರೆ ಅಂದರೆ ಬಹಳಷ್ಟು ಜನಕ್ಕೆ ಗೊತ್ತಿದೆಯೆಂದು ಕಾಣುತ್ತದೆ. ಅಲ್ಲೊಂದು ವಿಶೇಷತೆ ಇದೆ, ಅಲ್ಲಿ ಒಂದು ದರ್ಗಾ ಇದೆ, ಅದರೊಂದಿಗೆ ಒಂದು ಭೂತಪ್ಪನ ಗುಡಿಯಿದೆ, ಹಿಂದುಗಳು ಮತ್ತು ಮುಸಲ್ಮಾನರು ಪ್ರತಿನಿತ್ಯ 500 ಮಂದಿಯಾದರೂ ಅಲ್ಲಿರುತ್ತಾರೆ. ಶುಕ್ರವಾರ ಹಾಗೂ ಬೇರೆ ಬೇರೆ ವಾರದ ದಿನಗಳಲ್ಲಿ 1,500–2000 ಜನರಿರುತ್ತಾರೆ. ನಾವೊಂದು 40–50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅಲ್ಲಿ ಶುಚಿತ್ವ ಮತ್ತು ಬೇರೆ ಬೇರೆ ವ್ಯವಸ್ಥೆಯನ್ನು ಮಾಡಿದ್ದೇವೆ, ಇಡೀ ರಾಜ್ಯದ ಮಹಾರಾಷ್ಟ್ರದ ಕಡೆಯಿಂದ ಕೂಡ ಅಲ್ಲಿಗೆ ಜನ ಬರುತ್ತಾರೆ, ಅಂಥ ಒಂದು ಸೂಕ್ಷ್ಮವಾಗಿರತಕ್ಕಂಥ ಸ್ಥಳದಲ್ಲಿ, ಆ ಗುಡಿಯ ಮೂರು ನಾಲ್ಕು ಫರ್ಲಾಂಗ್ ದೂರದಲ್ಲಿ ಈ ಕೃತ್ಯ ನಡೆದಿದೆ. ನನಗೆ ಗೊತ್ತಿರುವಂತೆ ಇವತ್ತು ಅನೇಕ ಪತ್ರಿಕೆಗಳಲ್ಲಿ ಈ ವಿಷಯ ಬಂದಿದೆ, ದಾವಣಗೆರೆ ಜಿಲ್ಲೆಯ ಸುತ್ತಮುತ್ತಲಿರುವ ಕೆಲವು ತಾಲ್ಲೂಕು ಹಾಗೂ ಹಳ್ಳಿಗಳಲ್ಲಿ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶದಿಂದ ಬಂದಿರತಕ್ಕಂಥ ಅನೇಕ ಜನ ಅಲ್ಲಿ ನೆಲೆಸಿದ್ದಾರೆ. ಅಲ್ಲಿ ಮನೆ ಮಾಡಿಕೊಂಡಿದ್ದಾರೆ, ಬಾಡಿಗೆ ಮನೆ ಮಾಡಿಕೊಂಡಿದ್ದಾರೆ, ಸಂಬಂಧಿಕರ ಮನೆಯಲ್ಲಿ ಹಲವಾರು ಆಶ್ರಯವನ್ನು ಪಡೆದಿದ್ದಾರೆ. ಇವತ್ತು ಆ ಇಡೀ ಭಾಗ ಅತ್ಯಂತ ಸೂಕ್ಷ್ಮವಾಗಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಆ ಭಾಗದ ಜನ ಆತಂಕಕ್ಕೊಳಗಾಗಿದ್ದಾರೆ. ಸುದೈವ ಅಲ್ಲಿ ಹಿಂದೂ ಮತ್ತು ಮುಸಲ್ಮಾನ್ ಕುಟುಂಬಗಳು ಹಣಿಗೆರೆಯಲ್ಲಿ ನೆಲೆಸಿದ್ದಾರೆ. ನಿನ್ನೆಯೇನಾದರೂ ಆ ಅಪರಾಧಿಗಳು ಸಿಗದೇ ಹೋಗಿದ್ದರೆ ಅಲ್ಲಿ ಕೆಲವು ಹೆಣಗಳು ಬೀಳುತ್ತಿತ್ತು. ಅನಾವಶ್ಯಕವಾಗಿ ಅನುಮಾನದಲ್ಲಿ ಹೊಡೆದಾಟ ಮಾಡಿ ಗಲಭೆ ಆಗುತ್ತಿತ್ತು. ಆದರೆ ಊರಿನ ಜನ ಅವರನ್ನು ಹಿಡಿದುಕೊಟ್ಟಿದ್ದಾರೆ. ಮತ್ತೆ ಆ ಅಪರಾಧಿಗಳು ಊರಿನವರ ಮುಂದೆ ಒಪ್ಪಿಕೊಂಡಿದ್ದಾರೆ. ಒಬ್ಬ ಮೌಲ್ವಿ ಕುಂದೂರಿನಿಂದ ನಮ್ಮನ್ನು ಹೀಗೆ ಮಾಡಲಿಕ್ಕೆ ಇಲ್ಲಿಗೆ ಕಳುಹಿಸಿದ್ದ ಎಂದು ಹೇಳಿದ್ದಾರೆ. ಆ ಕುಂದೂರಿನಲ್ಲಿ ತಮಗೆ ಗೊತ್ತಿರುವಂತೆ ಆಗಸ್ಟ್ ತಿಂಗಳಿನಲ್ಲಿ ರಾಷ್ಟ್ರಧ್ವಜವನ್ನು

ಹಾರಿಸಲಿಕ್ಕೆ ಬಿಟ್ಟಿರಲಿಲ್ಲ. ಒಬ್ಬ ಪ್ರೈಮರಿ ಶಾಲೆಯ ಟೀಚರ್‌ಗೆ ಹೊಡೆದು ರಾಷ್ಟ್ರಧ್ವಜವನ್ನೇ ಹಾರಿಸಲಿಕ್ಕೆ ಬಿಡದೇನೇ ಅಲ್ಲಿ ಪಾಕಿಸ್ತಾನದ ಧ್ವಜವನ್ನು ಹಾರಿಸುತ್ತಿದ್ದರು. ಅಂಥ ಒಂದು ಪರಿಸ್ಥಿತಿಯಿರುವಂಥ ಊರಿದು. ಈ ರೀತಿಯಲ್ಲಿ ಎಲ್ಲೆಲ್ಲಿಂದಲೂ ಬಂದು ನೆಲೆಸಿ ಇವತ್ತು ನಮ್ಮ ರಾಜ್ಯವನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ ಮುಟ್ಟಿಸಬೇಕೆಂದು ಪ್ರಯತ್ನಿಸಿದ್ದಾರೆ ಅಥವಾ ಹೊಸ ಸರ್ಕಾರ ಬಂದ ನಂತರ ಇದನ್ನೆಲ್ಲಾ ವ್ಯವಸ್ಥಿತವಾಗಿ ವ್ಯಾಪಕವಾಗಿ ಮಾಡಿ ಈ ಸರ್ಕಾರವನ್ನು ಉರುಳಿಸಲಿಕ್ಕೆ ಏನಾದರೂ ವಿಶೇಷವಾದಂತಹ ಕುತಂತ್ರ, ಪಿತೂರಿಯನ್ನೇನಾದರೂ ಮಾಡಿದ್ದಾರೆಯೇ ಅಥವಾ ಇಲ್ಲಿ ಬೇರೆ ಬೇರೆ ಐ.ಎಸ್.ಐ. ಕಡೆಯಿಂದ ನಡೆದು ಈ ದೇಶದಲ್ಲಿ ಒಂದು ಅರಾಜಕತೆ ನಿರ್ಮಾಣವಾಗಬೇಕು, ಜನರ ಮಾನ ಪ್ರಾಣಹರಣವಾಗಬೇಕೆಂದು ಒಂದು ಪಿತೂರಿಯೇನಾದರೂ ಇದೆಯೇ? ಅದಕ್ಕೆ ನಮ್ಮ ರಾಜ್ಯದಲ್ಲಿ ಕುಮ್ಮುಕ್ಕು ಕೊಡುತ್ತಿರುವಂತಹವರು ಯಾರು? ಮತ್ತು ನಮ್ಮ ತಾಲ್ಲೂಕಿನ ಆ ದೇವಸ್ಥಾನ ಅಲ್ಲಿರುವುದು ಅಕ್ಕಪಕ್ಕದ ಊರಿನವರಿಗೆ ಗೊತ್ತಿಲ್ಲ. ಆ ಗುಡಿ ಒಂದು ಜಮೀನಿನ ಬಳಿ ಕಾಡಿನ ಮಧ್ಯದಲ್ಲಿದೆ. ಆ ಗುಡಿಯನ್ನು ಅವರಿಗೆ ತೋರಿಸಿದವರು ಯಾರು? ಅದನ್ನು ಯಾವ ಕಾರಣಕ್ಕಾಗಿ ಒಡೆದು ತೆಗೆದರು. ಏಕೆಂದರೆ ಮೊನ್ನೆ ಮೊನ್ನೆ ಭಟ್ಕಳದಲ್ಲಿ ಇಂಥಹ ಉದ್ವಿಗ್ನ ಪರಿಸ್ಥಿತಿಯಾಗಿದೆಯೆಂದು ಗೊತ್ತಿತ್ತು. ಇವತ್ತು ನನ್ನ ತಾಲ್ಲೂಕಿನಲ್ಲಿ, ಇವತ್ತು ಹಿಂದೂ ದೇವಸ್ಥಾನಗಳ ಮೇಲೆ, ವಿಗ್ರಹಗಳ ಮೇಲೆ ವ್ಯಾಪಕವಾಗಿ ಈ ರೀತಿಯ ಅತ್ಯಾಚಾರ ನಡೆಯುತ್ತಿದ್ದರೆ ಜನರು ಖಂಡಿತವಾಗಿ ಭಾವನಾತ್ಮಕವಾಗಿ ಕೆರಳುತ್ತಾರೆ. ಅರಾಜಕತೆ ನಿರ್ಮಾಣವಾಗಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ, ಮತ್ತೆ ಜನರ ಮಾನ ಪ್ರಾಣಗಳು ಹರಣವಾಗುವಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಗುತ್ತದೆ, ಆದ್ದರಿಂದ ನಾನು ಸರ್ಕಾರದಲ್ಲಿ ವಿನಂತಿಸುವುದಿಷ್ಟೇ ಇದನ್ನು ಲಘುವಾಗಿರುವಂಥ ಪ್ರಕರಣವೆಂದು ಯಾವುದೇ ಕಾರಣಕ್ಕಾಗಿಯೂ ಭಾವಿಸದೆ ಬಹಳ ಸೀರಿಯಸ್ಸಾಗಿ ಇದರ ಬಗ್ಗೆ ಗಮನ ಕೊಡಬೇಕು. ವಿಶೇಷವಾಗಿರುವಂಥ ಪೊಲೀಸ್ ಪಡೆಯನ್ನು ಅದಕ್ಕೆ ಬಳಸಬೇಕು. ಅದರ ಹಿನ್ನೆಲೆಯಲ್ಲಿ ಯಾರ್ಯಾರು ಇದ್ದಾರೆ, ಯಾವ ಕಾರಣಕ್ಕಾಗಿ ಈ ಕೃತ್ಯವನ್ನು ಮಾಡುತ್ತಿದ್ದಾರೆ, ಎಲ್ಲಿಂದ ಇದಕ್ಕೆ ಮೆಸೇಜ್ ಬರುತ್ತಿದೆ, ಮತ್ತೆ ಟೆಲಿಫೋನ್‌ನಲ್ಲಿ ಈ ಕೆಲಸ ಮುಗಿಸಿದ್ದೇವೆಂದು ಎಲ್ಲಿಗೆ ಮೆಸೇಜ್ ಕೊಟ್ಟರು, ಅದರ ಹಿಂದೆ ಯಾರಿದ್ದಾರೆ ಎನ್ನುವುದನ್ನು ಜಾಲಾಡಬೇಕು ಮತ್ತು ಮೂಲ ಬೇರುಗಳನ್ನು ಕಿತ್ತೆಸೆದು ಈ ರಾಜ್ಯ ಶಾಂತಿಯುತವಾಗಿರಬೇಕು, ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವಂಥ ಪರಿಸ್ಥಿತಿಯಲ್ಲಿ ಎಲ್ಲಾ ಕೋಮಿನ ಜನರೂ ಕೂಡ ಶಾಂತಿಯುತವಾಗಿ ಬದುಕುವ

ಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ವಿನಂತಿಸುತ್ತೇನೆ.

ಅಧ್ಯಕ್ಷರು: ಸರ್ಕಾರದ ಪರವಾಗಿ ಸಚಿವರೊಬ್ಬರು ಉತ್ತರ ನೀಡಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಜ್ಞಾನೇಂದ್ರರವರು ಎತ್ತಿರತಕ್ಕಂಥ ವಿಷಯದ ಬಗ್ಗೆ ನಿನ್ನೆ ದಿವಸವೇ ನಮಗೆ ಸುದ್ದಿ ಗೊತ್ತಾದ ತಕ್ಷಣ ಅಲ್ಲಿರತಕ್ಕಂಥ ಜಿಲ್ಲಾ ರಕ್ಷಣಾ ಅಧಿಕಾರಿಗಳು, ಎಲ್ಲಾ ಪೊಲೀಸ್ ಅಧಿಕಾರಿಗಳು ಅಲ್ಲಿಗೆ ಹೋಗಿ ಅವರನ್ನು ಅರೆಸ್ಟ್ ಮಾಡಿದ್ದಾರೆ. ಅವರು ಯಾರಿಗೆ ಫೋನ್ ಮಾಡುತ್ತಿದ್ದರು, ಆ ಫೋನ್ ಮಾಡುತ್ತಿದ್ದವನು ಒಬ್ಬ ಮುಲ್ಲಾ, ಆತ ಸಾಮಾನ್ಯವಾಗಿ ಆ ಹಳ್ಳಿಯಲ್ಲಿ ಕಾಯಿಲೆ ಬಂದವರಿಗೆ ಔಷಧಿಯನ್ನು ಕೊಡುತ್ತಾನೆ. ಈತ ಯಾರೊಬ್ಬ ಹುಡುಗನಿದ್ದಾನೆ, ಈತನ ಸೋದರಿಗೆ ಸ್ವಲ್ಪ ಕಾಯಿಲೆಯಾಗಿದ್ದು, ಆತನ ಅಂದರೆ ಆ ಮುಲ್ಲಾನ ಹತ್ತಿರ ಔಷಧಿಗೆಂದು ಹೋದರೆ ಆತ ಇವನ ಸೋದರಿಗೆ ಔಷಧಿಯನ್ನು ಕೊಡುತ್ತಾ, ಇವರಿಗೇನು ಹೇಳಿದ್ದಾನೆಂದರೆ, ಇವರು ಪಾಪದ ಹುಡುಗರಿವರು, ದುಷ್ಕೃತ್ಯ ಮಾಡಿದ್ದಾರೆ, ಅವರಿಗೆ ಶಿಕ್ಷೆಯಾಗುತ್ತದೆ, ಅದಕ್ಕೆ ಏನೂ ಅನುಮಾನ ಬೇಡ, ನೀವು ಹೋಗಿ ಆ ಎಡು ವಿಗ್ರಹಗಳನ್ನು ಒಡೆದು ಬಂದರೆ ನಿನ್ನ ಸೋದರಿಗೆ ವಾಸಿಯಾಗುತ್ತದೆ ಎಂದು ಹೇಳಿದ್ದಾನೆ. ಇದರ ಹಿನ್ನೆಲೆಯ ಬಗ್ಗೆ ಚಿಂತನೆಯನ್ನು ನಡೆಸಿದ್ದೇವೆ. ಸರ್ಕಾರ ಪೂರ್ಣವಾಗಿ ಅದರ ಬಗ್ಗೆ ಗಮನ ಹರಿಸಿದ್ದು ಆ ಹುಡುಗರಿಬ್ಬರನ್ನು ಅರೆಸ್ಟ್ ಮಾಡಿದ್ದೇವೆ ಮತ್ತು ಆ ಮುಲ್ಲಾನನ್ನು ಅರೆಸ್ಟ್ ಮಾಡಿ ಸಾಕಷ್ಟು ಮಾಹಿತಿಯನ್ನು ಹೊರಗೆ ತರುವ ಕಡೆ ಉನ್ನತ ಪೊಲೀಸ್ ಅಧಿಕಾರಿಗಳು ಪೂರ್ಣ ಗಮನ ಹರಿಸಿದ್ದಾರೆ, ಈ ಸದನದ ಮೂಲಕ ಆ ತೀರ್ಥಹಳ್ಳಿ ತಾಲ್ಲೂಕು ಹಾಗೂ ಶಿವಮೊಗ್ಗ ಜಿಲ್ಲೆಯ, ಪಕ್ಕದ ದಾವಣಗೆರೆ ಜಿಲ್ಲೆಯ ಎಲ್ಲಾ ನಾಗರೀಕರಲ್ಲಿ ಸರ್ಕಾರ ಎಲ್ಲಾ ವಿಚಾರದೊಳಗೆ ಕಾರ್ಯೋನ್ಮುಖರಾಗಿದ್ದೇವೆ, ಇನ್ನು ಮುಂದೆ ಈ ರೀತಿಯ ದುಷ್ಕೃತ್ಯವನ್ನು ನಡೆಯಲಿಕ್ಕೆ ಬಿಡುವುದಿಲ್ಲ, ತಪ್ಪಿತಸ್ಥರನ್ನು ಬಂಧಿಸಿದ್ದೇವೆ. ಇನ್ನೂ ಯಾರಾದರೂ ಇದ್ದರೆ ಅವರನ್ನು ಬಂಧಿಸುತ್ತೇವೆ. ಯಾವುದೇ ರೀತಿಯ ಸುಳ್ಳು ತಪ್ಪು ಮಾಹಿತಿಗಳಿಗೆ ಕಿವಿಗೊಡದೆ ಶಾಂತಿಯನ್ನು ಕಾಪಾಡಿಕೊಂಡು ಬರಬೇಕೆಂದು ಹೇಳಿ ನಾನು ಆ ಜನತೆಯಲ್ಲಿ ಬೇಡಿಕೊಳ್ಳುತ್ತೇನೆ.

(ಇ) ವಿಷಯ: ನಾಗರಹೊಳೆ ಮತ್ತು ಬಂಡೀಪುರ ಅಭಯಾರಣ್ಯದಲ್ಲಿ ಹುಲಿಗಳು ಮರಣ ಹೊಂದಿರುವ ಬಗ್ಗೆ.

ಶ್ರೀ ಸಿ. ಕೃಷ್ಣ ಭೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೇ, ಕಳೆದ ಒಂದು ವಾರದಲ್ಲಿ ನಾಗರಹೊಳೆ ಮತ್ತು ಬಂಡೀಪುರ ಅಭಯಾರಣ್ಯದಲ್ಲಿ